**ಸಾಕ್ಷಿಯನ್ನು ಮಧ್ಯಂತರ ಅರ್ಜಿ ನಂ.12 ಮತ್ತು 13 ರ ಮೇಲಿನ ಆದೇಶ ದಿಃ15-06-2026 ರನ್ವಯ ಇಂದು ದಿಃ *22/06/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಪಾಟೀ ಸವಾಲು ಃ ಶ್ರೀ ಆರಹೆಚ್ ವಾದಿ ಪರ ವಕೀಲರಿಂದ.***

ನನಗೆ ಮೃತ್ಯುಂಜಯ, ಮುರುಗೇಂದ್ರ ಮತ್ತು ಮುರಗೇಶ ಎನ್ನುವ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿ. ಬಸವರಾಜ ವಿಭೂತಿ ಇವರು ನನ್ನ ಸ್ವಂತ ಚಿಕ್ಕಪ್ಪ ಎಂದರೆ ಸರಿ, ಸದರಿಯವರು ಈಗ ಜೀವಂವಿಲ್ಲ ಎಂದರೆ ಸರಿ. ಬಸವರಾಜ ವಿಭೂತಿ ಇವರು 01-05-2021 ರಂದು ಮರಣ ಹೊಂದಿದ್ದಾರೆ. ಬಸವರಾಜ ವಿಭೂತಿರವರ ಜೊತೆಗೆ ನಾನು ಒಳ್ಳೆಯ ಬಾಂಧವ್ಯ ಇಟ್ಟುಕೊಂಡಿದ್ದೆ ಎಂದರೆ ಸರಿ. ಸದರಿಯವರು ವಾದಿ ಸಂಸ್ಥೆಯ ಮ್ಯಾನೇಜಿಂಗ ಡೈರಕ್ಟರ ಇದ್ದರು ಎಂದರೆ ಸರಿ. ವಾದಿ ಸಂಸ್ಥೆಯ ಕಾರ್ಯ ನಿರ್ವಾಹಕ ನಿರ್ದೇಶಕರು ತಮ್ಮ ಸಂಬಂಧಿಕರ ಹೆಸರಿಗೆ ವಾದಿಯ ಸಂಸ್ಥೆಯ ಪರವಾಗಿ ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ವಾದಿ ಸಂಸ್ಥೆಯ ವ್ಯವಹಾರಗಳ ಕುರಿತು ಸಂಪೂರ್ಣ ಮಾಹಿತಿ ಇಲ್ಲ. ಆದರೆ ಸ್ವಲ್ಪ ಮಾಹಿತಿ ಇದೆ. ವಾದಿ ಸಂಸ್ಥೆಯ ನಿರ್ದೇಶಕರು ಅಥವಾ ಕಾರ್ಯ ನಿರ್ವಾಹಕ ನಿರ್ದೇಶಕರು ವಾದಿ ಸಂಸ್ಥೆಯ ಹಣದಲ್ಲಿ

ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರಿಗೆ ಆಸ್ತಿ ಖರೀದಿ ಮಾಡಬಾರದು ಎನ್ನುವ ನಿಯಮ ಜಾರಿಯಲ್ಲಿದ್ದ ಬಗ್ಗೆ ನನಗೆ ಗೊತ್ತಿಲ್ಲ.

ದಾವಾ ಜಮೀನಿನ ಸರ್ವೇ ನಂಬರ 132 ಇರುತ್ತದೆ. ನಾನು ಖರೀದಿ ಮಾಡಿದ ಜಮೀನಿನ ಸರ್ವೇ ನಂಬರ 132 ಇರುತ್ತದೆ. ಸರ್ವೇ ನಂಬರ 132 ರ ಜಮೀನಿನ ಒಟ್ಟು ಕ್ಷೇತ್ರ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಪೈಕಿ ಯಾವ ದಿಕ್ಕಿನ ಮತ್ತು ಯಾವ ಭಾಗದ ಎಷ್ಟು ಕ್ಷೇತ್ರ ಖರೀದಿ ಮಾಡಿದೇವು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಸರ್ವೇ ನಂಬರ ಪೈಕಿ ಸಂಪೂರ್ಣ ಜಮೀನನ್ನು ನಾನು ಖರೀದಿ ಮಾಡಿದ್ದೇನೆ. ನನ್ನ ಪ್ರಕಾರ ಸದರಿ ಜಮೀನನ್ನು ಖರೀದಿಸಲು ಒಂದೇ ಖರೀದಿ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಸದರಿ ಖರೀದಿ ಪತ್ರ ನೊಂದಣಿಯಾದ ದಿನಾಂಕ ನನಗೆ ನೆನಪಿಲ್ಲ. ಸದರಿ ಖರೀದಿ ಪತ್ರದ ಅಸಲು ನನ್ನಲ್ಲಿದೆ ಎಂದರೆ ಸರಿ. ಸದರಿ ಖರೀದಿ ಪತ್ರದ ಅಸಲನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಅಸಲು ಖರೀದಿ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರವನ್ನು ಹಾಜರುಪಡಿಸುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ದಾಖಲೆಯನ್ನು ವಾದಿ ಸಂಸ್ಥೆಯವರು ಈ ಹಿಂದೆ ಆದ ಕರಾರಿನ ಪ್ರಕಾರ ಹಿಂಪಡೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಸರ್ವೇ ನಂಬರ 132 ರ ಒಟ್ಟು ಕ್ಷೇತ್ರ 8 ಎಕರೆ ಚಿಲ್ಲರೆ ಗುಂಟೆ ಜಮೀನನ್ನು ವಾದಿ ಸಂಸ್ಥೆಯವರು ಖರೀದಿ ಮಾಡಿದ ಕಾರಣ ಖರೀದಿಪತ್ರದ ಅಸಲನ್ನು ಅವರೇ ಇಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ.

ವಾದಿ ಸಂಸ್ಥೆಯವರು ನನ್ನ ಹಾಗೂ 1 ನೇ ಪ್ರತಿವಾದಿಯ ವಿರುದ್ದ 4 ಎಕರೆ 15 ಗುಂಟೆ ಜಮೀನಿನ ಕುರಿತು ದಾವೆ ದಾಖಲಿಸಿದ್ದಾರೆ. ಸದರಿ 4 ಎಕರೆ 15 ಗುಂಟೆ ಜಮೀನು ಈ ಮೇಲೆ

ಹೇಳಿದ ಸರ್ವೇ ನಂಬರಗೆ ಸೀಮಿತವಾಗಿದೆ ಎಂದರೆ ಸರಿ. ನನ್ನ ಪ್ರಕಾರ ಸರ್ವೇ ನಂಬರ 132 4 ಎಕರೆ 15 ಗುಂಟೆಗೆ ಸಂಬಂಧಿಸಿದ್ದು ಇರುತ್ತದೆ. ಸರ್ವೇ ನಂಬರ 132 ಕ್ಕೆ ಸಂಬಂಧಿಸಿದಂತೆ ವಾದಿ ಸಂಸ್ಥೆ ನಮ್ಮ ವಿರುದ್ಧ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೇ ನಂಬರ ರಾಮಾಪೂರ ಗ್ರಾಮಕ್ಕೆ ಸೇರಿದ್ದು ಇರುತ್ತದೆ. ರಾಮಾಪೂರ ಗ್ರಾಮದ ಸರ್ವೇ ನಂಬರ 132 ರಲ್ಲಿ ಕ್ಷೇತ್ರ 4 ಎಕರೆ 15 ಗುಂಟೆ ಜಮೀನನ್ನು ನಾನು ಖರೀದಿ ಮಾಡಿದ್ದೇನೆ ಎಂದು ತೋರಿಸಲು ನನ್ನಲ್ಲಿ ಯಾವುದೇ ದಾಖಲೆ ಇಲ್ಲ ಎಂದರ ಸರಿ. ದಾವಾ ಜಮೀನಿನ ಸರ್ವೇ ನಂಬರ 132/1+2 ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಜಮೀನಿನ ಸರ್ವೇ ನಂಬರ ಮೊದಲು 132/1+2 ಬಿ ಇತ್ತು ಎನ್ನುವ ವಿಷಯ ನನಗೆ ಗೊತ್ತಿಲ್ಲ. ರಾಮಾಪೂರ ಗ್ರಾಮದ ಒಟ್ಟು 9 ಸರ್ವೇ ನಂಬರಗಳು ಅಂದರೆ ಸರ್ವೇ ನಂಬರ 76/2, 76/1 ಎ, 76/1 ಬಿ, 132/1/2 ಎ, 91, 132/1+2 ಬಿ, 116, 132/1/2 ಎ ಮತ್ತು 135 ಜಮೀನುಗಳಿಗೆ ವಾದಿ ಸಂಸ್ಥೆ ಮಾಲೀಕರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಹೀಗೆ ಹೇಳಿದ ಸರ್ವೇ ನಂಬರ ಎಲ್ಲ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿವೆ ಎಂದರ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಎಲ್ಲ ಸರ್ವೇ ನಂಬರಗಳ ಒಟ್ಟು ಕ್ಷೇತ್ರ ಅಂದಾಜು 80 ಎಕರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ 80 ಎಕರೆ ಜಮೀನಿಗೆ ಒಂದೇ ಕಂಪೌಂಡ ಇದೆ ಎಂದರೆ ಸರಿಯಲ್ಲ. ಸದರಿ ಸರ್ವೇ ನಂಬರಗಳ ಜಮೀನುಗಳಿಗೆ ಪ್ರತ್ಯೇಕ ಕಂಪೌಂಡ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ವಸ್ತುಸ್ಥಿತಿ ಗೊತ್ತಿಲ್ಲದ ಕಾರಣ ಮೇಲೆ ಹೇಳಿದ ಜಮೀನುಗಳ ಒಟ್ಟು ಕಂಪೌಂಟ ಇದೆಯೋ ಅಥವಾ ಬೇರೆ ಬೇರೆ ಇದೇಯೊ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

ವಾದಿ ಸಂಸ್ಥೆಯವರು ಈ ಮೇಲೆ ಹೇಳಿದ ಎಲ್ಲ ಸರ್ವೇ ನಂಬರಗಳ ಕುರಿತು ಸಾರ್ವಜನಿಕ ನೋಟೀಸು/ಪ್ರಕಟಣೆ ಕೊಟ್ಟಿರುತ್ತಾರೆ ಎಂದರೆ ಸರಿ. ಹಾಗೇ ಪ್ರಕಟಣೆ/ನೋಟೀಸಿನ ವಿಚಾರ ನನಗೆ

ಗೊತ್ತಿದೆ ಎಂದರೆ ಸರಿ. ಸದರಿ ಪ್ರಕಟಣೆಯಲ್ಲಿ ಕಾಣಿಸಿರುವ ಒಟ್ಟು 80 ಎಕರೆ ಜಮೀನು ವಾದಿ ಸಂಸ್ಥೆಯ ಒಡತನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರು ಕಾಲಾವಕಾಶ ಕೇಳಿದ್ದು ರೂ.500/-ರ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.